ಸಲವೂ ದೇವರಿಗೆ ಕೈಮುಗಿದವರಲ್ಲ. ದೇವರೇ ಇಲ್ಲವೆಂದ ಮೇಲೆ ಪೂಜಿಸುವುದು ಎಲ್ಲಿಂದ ಬಂತು ಎಂಬುದು ಅವರ ವಾದ. ಆದರೆ ಬೇರೆಯವರ ನಂಬಿಕೆಗೆ ಎಂದೂ ಧಕ್ಕೆ ತಂದವರಲ್ಲ. ಉಳಿದವರಿಗೆ ಅದರಿಂದ ಶಾಂತಿ ಸಿಗುವಂತಿದ್ದರೆ ಪೂಜೆ ಮಾಡಿಕೊಳ್ಳಲಿ ಬಿಡಿ ಎಂಬಷ್ಟು ಉದಾರವಾದಿ ಅವರು. ಬಹುಪಾಲು ಚಿಂತಕರ ಮನೆಗಳಲ್ಲಿ ಅವರನ್ನು ಹೊರತುಪಡಿಸಿ ಉಳಿದ ಸದಸ್ಯರೆಲ್ಲರೂ ಅಪ್ಪಟ ಜಾತೀವಾದಿಗಳಾಗಿಯೋ, ಇಲ್ಲವೇ ಅತ್ಯಂತ ದೈವಭಕ್ತರಾಗಿಯೋ ಇರುವುದನ್ನು ಕಾಣುತ್ತೇವೆ. ಆದರೆ ಬಿ.ವಿ.ವೀ. ಅವರ ಮಕ್ಕಳು ಸಹ ಇದಕ್ಕೆ ತದ್ವಿರುದ್ಧ. ಹಿರಿಯ ಕೃಷಿ ಅಧಿಕಾರಿ ಸುಧಾ, ಅಮೆರಿಕಾದಲ್ಲಿ ಮನೋವೈದ್ಯೆಯಾಗಿರುವ ವೀಣಾ ಅವರಲ್ಲಿಯೂ ಇಂಥವೇ ಗುಣಗಳು ರಕ್ತಗತವಾಗಿ ಮೇಳೈಸಿವೆ. ಮನುಷ್ಯನಲ್ಲಿ ನೈತಿಕತೆಯೆಂಬುದೊಂದಿದ್ದರೆ ಸಾಕು, ಯಾವುದೇ ಜಾತಿ, ಧರ್ಮಗಳ ಅಗತ್ಯವೇ ಈ ಪ್ರಪಂಚಕ್ಕಿಲ್ಲ ಎಂಬ ನಿಲುವು ಅವರದು. ಅಪ್ಪಟ ಮನುಷ್ಯ ಪ್ರೀತಿಯನ್ನು ಪ್ರತಿಪಾದಿಸುವ ಈ ಗುಣಗಳನ್ನೇ ಅಲ್ಲವೇ ಎಲ್ಲ ಧರ್ಮಗಳೂ ಬೋಧಿಸುವುದು. ನಮ್ಮಿಂದ ಇನ್ನೊಬ್ಬರಿಗೆ ತೊಂದರೆಯಾಗುವುದಿಲ್ಲವೆಂದಾದರೆ ಪರಸ್ಪರ ಹೊಡೆದಾಟಗಳಿಗೆ ಕಾರಣವಾಗಿರುವ ಈ ಧರ್ಮಗಳಾದರೂ ಯಾಕೆ ಬೇಕು?

ಕಳೆದ ವರ್ಷ ದಾವಣಗೆರೆಗೆ ಭೇಟಿ ನೀಡಿದ್ದಾಗ ವಿದ್ಯಾನಗರದಲ್ಲಿರುವ ಅವರ ಮನೆಯ ಮೇಲಿನ ಅತಿಥಿ ಕೊಠಡಿಯಲ್ಲಿ ಉಳಿಯಬೇಕಾಗಿ ಬಂದಿತ್ತು. ಆಗ ತಾನೇ ಕಲಬುರ್ಗಿಯವರ ಹತ್ಯೆಯಾಗಿ ವಾರವೇನೋ ಕಳೆದಿತ್ತು. ಅದರ ಹಿಂದಿನ ತಿಂಗಳಷ್ಟೇ ಕಲಬುರ್ಗಿಯವರು ಬಂದಿದ್ದಾಗ ಅದೇ ಕೋಣೆಯಲ್ಲಿ ಉಳಿದುಕೊಂಡಿದ್ದಾಗಿ ಅವರ ಅಳಿಯ ಚಂದ್ರಮೌಳಿ ಸಹಜವಾಗಿ ಹೇಳಿದ್ದರು. ಆದರೆ ಅವರ ಬಗ್ಗೆ ಟೀವಿಯಲ್ಲಿ ನೋಡಿದ್ದ ನನ್ನ ಹೆಂಡತಿಗೆ ಒಳಗೇ ಏನೇನೋ ತಳಮಳ. ಹೇಗೋ ನಿದ್ರೆಯಿಲ್ಲದೆ ರಾತ್ರಿಯನ್ನು ಕಳೆದು ಬೆಳಗ್ಗೆ ತಿಂಡಿಗೆ ಕುಳಿತಾಗ ಮುಗ್ಧವಾಗಿ ಬಿ.ವಿ.ವೀ.ಯವರನ್ನು ಕೇಳಿಯೇಬಿಟ್ಟಳು, 'ನೀವು ದೇವರ ಪೂಜೆಯನ್ನೇ ಮಾಡುವುದಿಲ್ಲವಂತೆ! ಹೌದೇ?' ಎಂದು. ಸಹಜವಾಗಿಯೇ 'ಇಲ್ಲ' ಎಂದರು. 'ಹಾಗಾದರೆ ಜೀವನದಲ್ಲಿ ನಿಮಗೆ ಯಾವ ಕಷ್ಟಗಳೂ ಬಂದಿಲ್ಲವೇ?' ಎಂಬ ಮರುಪ್ರಶ್ನೆ. 'ನಾವು ಯಾರಿಗೂ ಕಷ್ಟ ಕೊಡದಿದ್ದರೆ, ನಮಗೆ ಯಾಕೆ ಕಷ್ಟಗಳು ಬರುತ್ತವೆ' ಎಂದರು. ಹಾಗೆ ಬದುಕಿದ್ದರು ಕೂಡ. ಬಲವಾಗಿ ಹೆಜ್ಜೆಯಿಟ್ಟರೆ ಎಲ್ಲಿ ಇರುವೆಗಳು ಸತ್ತು ಹೋದಾವೋ ಎಂಬಂಥ ಮನೋಭಾವ ಅವರದು. ಮತ್ತೆ, ಅವರ ಪತ್ನಿ ಅನಂತಮ್ಮನವರ ಕಡೆ ತಿರುಗಿ, 'ನೀವೂ ಪೂಜೆ ಮಾಡುವುದಿಲ್ಲವೇ?' ಎನ್ನುತ್ತಿದ್ದಂತೆಯೇ, ಅವರ ಮೌನವನ್ನೂ ಮೀರಿ, 'ಅವರು ದೇವರ ಪೂಜೆ ಮಾಡುತ್ತಾರೆ, ನಾನು ಅವರ ಪೂಜೆ ಮಾಡುತ್ತೇನಲ್ಲ... ಹಾಗಾಗಿ ಅವರ ದಯದಿಂದ ನನಗೆ ಯಾವ ತೊಂದರೆಗಳೂ ಬಂದಿಲ್ಲ' ಎಂದವರು ಮಾರ್ಮಿಕವಾಗಿ ನುಡಿದಾಗ, ಅದರಲ್ಲಿ ಏನೆಲ್ಲ ಅರ್ಥಗಳು ಹೊಳೆದಿದ್ದವು.

ಅಂಥವರ ನಿರ್ಜೀವ ದೇಹ, ಅವರೇ ಕಟ್ಟಿಸಿದ 'ಲೋಕಾಯತ'ದಲ್ಲಿ ಮೊನ್ನೆಮೊನ್ನೆ ನಿರ್ಮಮಕಾರವಾಗಿ ಮಲಗಿತ್ತು. ನಯವಾಗಿ ಶೇವ್ ಮಾಡಿದ್ದ ಅವರ ಮುಖದಲ್ಲಿ ಮಗುವಿನ ಮುಗ್ಧತೆ ಹಾಗೇ ಇತ್ತು. ಸತ್ತ ಕೂಡಲೆ ಎಲ್ಲರಂತೆ ಮನೆಯಾಚೆ ಮಲಗಿಸದೆ ಪ್ರೀತಿಯಿಂದ ನಟ್ಟನಡುಮನೆಯಲ್ಲಿ ತಂದಿರಿಸಿದ್ದ ಕುಟುಂಬಸ್ಥರ ಹೃದಯ ವೈಶಾಲ್ಯತೆ ಕಂಡು ಎದೆತುಂಬಿಬಂತು. ಅವರ ಮಗಳು ಸುಧಾರಿಗೆ ಸಾಂತ್ವನ ಹೇಳಹೋದರೂ ಹೇಳಲಾಗದೇ ಉಬ್ಬಿಬಂದ ಸೆರೆಯನ್ನು ಮರೆಮಾಡಿಕೊಂಡು ಉಗುಳುನುಂಗಿದೆ. ವಿಭೂತಿ ಹಚ್ಚಿದ್ದ ಯಾರೋ ಹೆಣ್ಣು ಮಗಳು ಹೇಳಿದ, 'ಶರಣರ ಬದುಕ ಮರಣದಲ್ಲಿ ಕಾಣು' ಎಂಬ ಮಾತಿಗೆ ಗೋಣಾಡಿಸಿ ಅನುಮೋದಿಸಿದೆ. ಜೀವನದ ಕೊನೆ ಉಸಿರಿರುವವರೆಗೂ ಅವರು ಯಾರಿಗೂ ತೊಂದರೆ ಕೊಡಲಿಲ್ಲ, ಯಾರಿಗೂ